**ಶಿವಮೊಗ್ಗ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ, ನಿದಿಗೆ ಅಂಚೆ – 577 222, ಶಿವಮೊಗ್ಗ.**

ಐ.ಎಫ್.ಟಿ. ಸಂಖ್ಯೆ:ಶಿಸಹಾಒ:ಶೇಮತಾಂ: ಆನಂದ್ ಬೇಟಿ/165/988 / 2016-17 ದಿನಾಂಕ: 05.05.2016

# ಷರತ್ತು ಮತ್ತು ನಿಬಂಧನೆಗಳು

1. ಗುಜರಾತ್ ರಾಜ್ಯದ ಆನಂದ್ ಪ್ರವಾಸಕ್ಕೆ ಟೆಂಡರ್ ಹಾಕುವವರು ಟೆಂಡರ್ ಡಾಕುಮೆಂಟ್‌ಗಳನ್ನು ಷರತ್ತು ಮತ್ತು ನಿಬಂಧನೆ ಸಹಿತ ನಿಗಧಿತ ಶುಲ್ಕ ಪಾವತಿಸಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.
2. ಗುಜರಾತ್ ರಾಜ್ಯದ ಆನಂದ್ ಪ್ರವಾಸಕ್ಕೆ ಟೆಂಡರ್ ಹಾಕ ಬಯಸುವವರು ಕಡ್ಡಾಯವಾಗಿ ಕರ್ನಾಟಕ ಸರ್ಕಾರದ ಕೆ.ಎಸ್.ಟಿ.ಡಿ.ಸಿ. ಯಿಂದ ಲೈಸೆನ್ಸ್ ಪಡೆದಿರಬೇಕು ಲೈಸೆನ್ಸ್ ಪ್ರತಿಯನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಅಪ್‌ಲೋಡ್ ಮಾಡತಕ್ಕದ್ದು.
3. ಆನಂದ್ ಪ್ರವಾಸಕ್ಕೆ ಟೆಂಡರ್ ಹಾಕ ಬಯಸುವವರು ರೂ. 50000/– ಇ.ಎಂ.ಡಿ. ಯನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ನಿಯಮಾವಳಿಗಳ ರೀತ್ಯ ಪಾವತಿಸತಕ್ಕದ್ದು, ಕಡಿಮೆ ಇ.ಎಂ.ಡಿ. ಇದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
4. ಆನಂದ್ ಪ್ರವಾಸಕ್ಕೆ ಬಸ್ ಒದಗಿಸುವವರು 2014 ಅಥವಾ ನಂತರದ ಸಾಲಿನ ಅರೆಸುವಿಹಾರಿ ಅಥವಾ ಅದಕ್ಕೆ ಸಮನಾದ ಬಸ್ಸನ್ನು ಒದಗಿಸುವುದು. ತಾವು ಹೊಂದಿರುವ ಅಥವಾ ಪ್ರವಾಸಕ್ಕೆ ಒದಗಿಸುವ ಅರೆಸುವಿಹಾರಿ ಬಸ್ಸಿನ (ವಾಹನದ) ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವುದು. (RC Book, FC Certificate, Insurance Premium Certificate, Tax card, Permit, Interstate Permit, ಮುಂತಾದವುಗಳು).
5. ವಾಹನವು ಶಿವಮೊಗ್ಗ/ದಾವಣಗೆರೆ/ ಚಿತ್ರದುರ್ಗ ಅಥವಾ ಸೂಚಿಸಿದ ಸ್ಥಳದಿಂದ ಯಿಂದ ಹೊರಟು ಅಧ್ಯಯನ ಪ್ರವಾಸ ಮುಗಿಸಿ ಬರುವವರೆಗೂ ಸಂಘದ ಅಧ್ಯಕ್ಷರು/ಕಾರ್ಯದರ್ಶಿಗಳಿಗೆ ಯಾವುದೇ ಲೋಪದೋಷವಾಗದಂತೆ ಕಾಫಿ,ಟೀ ಉಪಹಾರ, ಊಟ ವಸತಿಗಳನ್ನು ಉತ್ತಮ ರೀತಿಯಲ್ಲಿ ವ್ಯವಸ್ಥೆ ಮಾಡುವುದು.
6. ಟೆಂಡರ್ ಸಲ್ಲಿಸಬಯಸುವವರು ಈ ರೀತಿ ಪ್ರವಾಸ ವ್ಯವಸ್ಥೆ ಮಾಡಿರುವ ಸಂಸ್ಥೆಗಳಿಂದ ನೀಡಿರುವ ಕನಿಷ್ಟ 01 ಅನುಭವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸುವುದು.
7. ಡಿಸೇಲ್ ದರ ಹೆಚ್ಚು/ಕಡಿಮೆಯಾದಲ್ಲಿ ಟೆಂಡರ್ ದರವನ್ನು ಬದಲಾಯಿಸಲಾಗುವುದಿಲ್ಲ.
8. ಅಧ್ಯಯನ ಪ್ರವಾಸವನ್ನು ಒಟ್ಟು 9 ತಂಡಗಳಿಗೆ ಏರ್ಪಡಿಸಿದ್ದು, ಅಧ್ಯಕ್ಷರ ತರಬೇತಿ ಪ್ರವಾಸ ಕಾರ್ಯಕ್ರಮಕ್ಕೆ ಗುಜರಾತ್‌ನ ಎನ್.ಡಿ.ಡಿ.ಬಿ. ಆನಂದ್‌ನಲ್ಲಿ ಸಂಘದ ಅಧ್ಯಕ್ಷರುಗಳಿಗೆ 2 ದಿನಗಳ ಊಟ ಹಾಗೂ ವಸತಿ ವ್ಯವಸ್ಥೆ ಇದ್ದು, ಇದನ್ನು ಪರಿಗಣಿಸಿ ಅಧ್ಯಕ್ಷರ ತರಬೇತಿ ಪ್ರವಾಸಕ್ಕೆ ಹಾಗೂ ಕಾರ್ಯದರ್ಶಿಗಳ ಅಧ್ಯಯನ ಪ್ರವಾಸಕ್ಕೆ ಪ್ರತ್ಯೇಕ ದರ ನಮೂದಿಸುವುದು.
9. ಟೆಂಡರ್‌ದಾರರು ನಮೂದಿಸುವ ದರಗಳು ಎಲ್ಲಾ ತೆರಿಗೆ, ಕುಡಿಯುವ ನೀರು, ಕಾಫಿ/ಟೀ ಉಪಹಾರ, ಊಟ ವಸತಿ ಪ್ರೇಕ್ಷಣೀಯ ಸ್ಥಳಗಳ ಪ್ರವೇಶ ಶುಲ್ಕ ಹಾಲ್ಟಿಂಗ್ ಚಾರ್ಜ್ ಡ್ರೈವರ್ ಬೇಟಾ ಅಂತರ ರಾಜ್ಯ ಪರ್ಮಿಟ್, ಸೇವಾ ತೆರಿಗೆ, ಇತರೆ ಎಲ್ಲಾ ಸೇರಿರುತ್ತದೆ.
10. ಅಧ್ಯಯನ ಪ್ರವಾಸದ ಸಮಯದಲ್ಲಿ ವಾಹನವೇನಾದರೂ ಅಪಘಾತಕ್ಕೀಡಾದಲ್ಲಿ ಟೆಂಡರ್‌ದಾರರೇ ಸೂಕ್ತ ಬದಲಿ ವ್ಯವಸ್ಥೆ ಮಾಡತಕ್ಕದ್ದು.
11. ಸಂಘಗಳ ಅಧ್ಯಕ್ಷರ/ ಕಾರ್ಯದರ್ಶಿಗಳ ಅಧ್ಯಯನ ಪ್ರವಾಸವು ಮುಗಿದ ನಂತರ ಪಾನ್ ನಂಬರ್, ಮತ್ತು ಸೇವಾ ತೆರಿಗೆ ನಂಬರ್ ನಮೂದಿಸಿ ವ್ಯವಸ್ಥಾಪಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟ ಇವರ ಹೆಸರಿಗೆ ದ್ವಿಪ್ರತಿಯಲ್ಲಿ ಬಿಲ್ ನೀಡಿದಲ್ಲಿ ಒಕ್ಕೂಟದಿಂದ ಚೆಕ್ ಮೂಲಕ ಹಣ ಪಾವತಿಸಲಾಗುವುದು.

12. ಟೆಂಡರ್ ಅವಧಿಯು ಸಂಘದ ಅಧ್ಯಕ್ಷರ/ಕಾರ್ಯದರ್ಶಿಗಳ 9 ತಂಡಗಳ ತರಬೇತಿ ಮತ್ತು ಅಧ್ಯಯನ ಪ್ರವಾಸಕ್ಕೆ ಮಾತ್ರ ಸೀಮಿತವಾಗಿರುತ್ತದೆ. 9 ತಂಡಗಳ ಟ್ರಿಪ್‌ನಲ್ಲಿ ಹೆಚ್ಚು/ಕಡಿಮೆ ಆಗಬಹುದಾಗಿದೆ.
13. ಟೆಂಡರ್‌ನಲ್ಲಿ ಪ್ರಕಟಿಸಿದಂತೆ 9 ತಂಡಗಳ ಅಧ್ಯಯನ ಪ್ರವಾಸವು ಮುಗಿದ ನಂತರ ಇ.ಎಂ.ಡಿ. ಹಣವನ್ನು ಹಿಂದಿರುಗಿಸಲಾಗುವುದು.

**ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.**

**ಮೇಲಿನ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಓದಿ ಒಪ್ಪಿ ಸಹಿ ಮಾಡಿರುತ್ತೇನೆ.**

ಸ್ಥಳ: ಟೆಂಡರ್‌ದಾರರ ಸಹಿ/ಸೀಲು

ದಿನಾಂಕ: